**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ 2561/2024 ಸಿ.ಡಬ್ಲ್ಯೂ–1 ಪಿ.ಡಬ್ಲ್ಯೂ-1**

| | | |
|---|---|---|
| **ಹೆಸರು** | ಃ | ರಮೇಶ |
| ತಂದೆಃ ಗಂಡ | ಃ | ಅಮೃತ |
| **ವಯಸ್ಸು** | ಃ | 30 ವರ್ಷ |
| **ಉದ್ಯೋಗ** | : | ಕೂಲಿಕೆಲಸ |
| **ವಾಸಸ್ಥಳ** | ಃ | ಭೂಸನೂರ |

**ದಿನಾಂಕಃ 23.08.2025**

**ಸತ್ಯ ಪ್ರತಿಜ್ಞೆಯ ಮೇರೆಗೆ**

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರು ಪರಿಚಯ ಇರುತ್ತಾರೆ. ಚಾಸಾ 7 ನನ್ನ ಹೆಂಡತಿ. ಚಾಸಾ-8 ನನ್ನ ತಾಯಿ. ಚಾಸಾ 2 ರಿಂದ 6 ರವರು ಪರಿಚಯ ಇರುತ್ತಾರೆ.

ಸುಮಾರು 1 ವರ್ಷದ ಹಿಂದೆ ಆರೋಪಿತರು ನಮ್ಮ ಊರಿನ ಹನುಮಾನ ದೇವಸ್ಥಾನದ ಎದುರುಗಡೆ ನನ್ನನ್ನು ಕಟ್ಟಿ ಹಾಕಿ, ಮುಖದ ಮೇಲೆ ಕಾಲು ಇಟ್ಟು ಬಡಿಗೆಯಿಂದ ಹೊಡೆದಿರುತ್ತಾರೆ ಮತ್ತು ಈಗ ನನಗೆ ಅವಾಚ್ಯವಾಗಿ ಬೈದು ಸದರಿ ಪ್ರಕರಣವನ್ನು ತೆಗೆದುಕೊಳುತ್ತಿಯಾ ಅಂತಾ ಬೈದಿರುತ್ತಾರೆ. ನಂತರ ಪೋಲಿಸರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ.

ಸಾಕ್ಷಿಯು ಈಗ ಒಂದು ಬಡಿಗೆಯನ್ನು ನೋಡಿ ಗುರುತಿಸಿದು ಅದನ್ನು ಮು.ಮಾ. 1 ಅಂತಾ ಗುರುತಿಸಲಾಯಿತು. ಸಾಕ್ಷಿಯು ದೂರಿನ ಮೇಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1 ಎ, ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ದಿಃ 03-02-2024 ರಂದು ಸಾಯಂಕಾಲದ ಸಮಯದಲ್ಲಿ ನಮ್ಮ ಊರಿನ ಹನುಮಂತರಾಯ ಮೈನಾಳ ಅವರು ಮೃತ ಪಟ್ಟಿದ್ದರು ಎಂದರೆ ಸರಿ. ಸದರಿ ವಿಷಯವಾಗಿ ಭಜನೆ ಕಾರ್ಯಕ್ರಮ ಇತ್ತು ಎಂದರೆ ಸರಿ. ನಾನು ಮತ್ತು ಅವರ ಸಂಬಂಧಿಕರು ಭಜನಾ ಕಾರ್ಯಕ್ರಮಕ್ಕೆ ಹೋಗಿದ್ದೇವು ಎಂದರೆ ಸರಿ. ದಿಃ 04-02-2024 ರ ಮಧ್ಯ ರಾತ್ರಿ 2.00 ಗಂಟೆ ಸುಮಾರಿಗೆ ಮನೆ ಕಡೆಗೆ ಹೋದಾಗ ಆರೋಪಿತರು ಬಂದು ಏ ಕಟಬರ ಜಾತಿ ಸೂಳೆ ಮಗನೇ,, ನಿನಗೆ ಇಲ್ಲಿ ಯಾರುಬರಲು ತಿಳಿಸಿದ್ದಾರೆ ಮೃತರಾದವರು ನಮ್ಮ ಸಂಬಂಧಿಕರು ನಮ್ಮ ಜಾತಿಯವರು ಇದ್ದು ನಿನ್ನೆಕೆ ಬಂದಿದ್ದಿಯಾ ಅಂತಾ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ನಾನು ಈ ರೀತಿ ಬೈಯುದು ಸರಿ ಅಲ್ಲ ಅಂತಾ ಹೇಳಿ ಹನುಮಾನ ಗುಡಿಯ ಹತ್ತಿರ ಹೋಗಿರುತ್ತೇನೆ. ಆಗ ಅಲ್ಲಿ ಆರೋಪಿತರು ಸಹ ಬಂದಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ನನಗೆ ಏಕೆ ಹೋಗುತ್ತಿಲ್ಲಾ ಇಲ್ಲೇಕೆ ನಿಂತಿರುವೇ ಸೂಳೆ ಮಗನೇ ಎಂದು ಅವಾಚ್ಯವಾಗಿ ಬೈಯಲು ಪ್ರಾರಂಭಸಿದ್ದನು ಎಂದರೆ ಸರಿ. ಆಗ ನಾನು ಆ ರೀತಿ ಬೈಯುದು ಸರಿ ಅಲ್ಲ ನನಗೆ ಮನೆಗೆ ಹೋಗುತ್ತೇನೆ ದಾರಿ ಬಿಡಿ ಅಂತಾ ಹೇಳಿರುತ್ತೇನೆ ಎಂದರೆ ಸರಿ. ಆಗ ಆರೋಪಿ ಸಂಖ್ಯೆ 1 ಮತ್ತು 2 ನೇ ಮು. ಮಾ. 1 ನ್ನು ತೆಗೆದುಕೊಂಡು ಹಣೆಯ ಮೇಲೆ ಮತ್ತು ಎಡಗೈ-ಮುಂಗೈಗೆ ಹೊಡೇದಿರುತ್ತಾರೆ ಎಂದರೆ ಸರಿ. ಅದೇ ಕಟ್ಟಿಗೆ ಯಿಂದ ನನ್ನ ಮೂಗಿನ ಮೇಲೆ ಹೊಡೆದು ಗಾಯ ಮಾಡಿರುತ್ತಾರೆ ಎಂದರೆ ಸರಿ ಮತ್ತು ಎಡಗೈಗೆ ತನ್ನ ಬಲಗೈ ಮುಷ್ಟಿ ಮಾಡಿ ಜೋರಾಗಿ ಕಣ್ಣಿನ ಮೇಲೆ ಹೋಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿ. ಕಣ್ಣಿಗೆ ಹೊಡೆದ ಕಾರಣ ಕಣ್ಣಿನ ಸುತ್ತಲೂ ಕಂದು ಬಣ್ಣ ಆಗಿರುತ್ತದೆ ಎಂದರೆ ಸರಿ. 2 ನೇ ಆರೋಪಿಯು ಕೆಳಗೆ ಬಿಳಿಸಿ ಕಾಲಿನಿಂದ ಸೊಂಟದ ಮೇಲ್ಭಾಗದಲ್ಲಿ ಒದ್ದು ಗುಪ್ತಗಾಯ ಮಾಡಿರುತ್ತಾನೆ ಎಂದರೆ ಸರಿ. 3 ನೇ ಆರೋಪಿಯು ನಾನು ಕೆಳಗೆ ಬಿದ್ದಾಗ ತೊಡೆಯ ಮೇಲೆ ಕಾಲಿನಿಂದ ಗಾಯ ಪಡಿಸಿರುತ್ತಾರೆ ಎಂದರೆ ಸರಿ ಮತ್ತು ಬಲಗಣ್ಣಿಗೆ ಕೈಮುಷ್ಟಿ ಮಾಡಿ ಹೊಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿ. ಸದರಿ ಜಗಳ ಚಾಸಾ 4 ರಿಂದ 6 ರವರು ನೋಡಿ ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ಆರೋಪಿತರು ಎಲ್ಲಾರು ಸೇರಿ ಇವತ್ತು ಉಳಿದಿದ್ದಯಾ ಇನ್ನೊಮ್ಮೆ ಸಿಕ್ಕರೇ ಜೀವಸಹಿತ ಬಿಡುವುದಿಲ್ಲ ಅಂತಾ ಜೀವಬೆದರಿಕೆ

ಹಾಕಿರುತ್ತಾರೆ ಎಂದರೆ ಸರಿ. ನಂತರ ಚಾಸಾ 4 ರಿಂದ 6 ರವರ ನನ್ನನ್ನು ಮನೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಂತರ ಚಾಸಾ 7 ಮತ್ತು 8 ರವರು ನನ್ನನ್ನು ನಿಂಬರ್ಗಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಕರೆದುಕೊಂಡು ಹೋಗಬೇಕು ಅಂತಾ ತಿಳಿಸಿದ ಕಾರಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಅಲ್ಲಿ ಪೋಲಿಸರು ಬಂದಿರುತ್ತಾರೆ ಅವರಿಗೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ದೂರನ್ನು ನೀಡುತ್ತೇನೆಂದು ಹೇಳಿರುತ್ತಾರೆ. ತಡವಾಗಿ ದಿಃ 07-02-2024 ರಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ಶ್ರೀ. ಎ ಡಬ್ಲೂ. ಎ ವಕೀಲರಿಂದಃ-

ನನ್ನ ಮತ್ತು ಆರೋಪಿತರ ಮದ್ಯ ಯಾವುದೇ ಆಸ್ತಿ ಸಂಬಂದಿವಾಗಿ ಜಗಳ ಇಲ್ಲ ಎಂದರೆ ಸರಿ. ಪ್ರಕರಣ ನಡೆಯುವುದಕ್ಕಿಂತ ಮುಂಚೆ ನಮ್ಮ ಮಧ್ಯ ಮತ್ತು ಆರೋಪಿತರ ಮಧ್ಯ ಯಾವುದೇ ವೈರತ್ವ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಯಾರ ಮಾತು ಕೇಳಿದ್ದಾರೋ ನನಗೆ ಗೊತ್ತಿಲ್ಲ ಅವರು ನನ್ನ ಜೀವ ಹೊಡೆಯುವವರು ಇದ್ದಾರೆ ಅಂತಾ ನುಡಿಯುತ್ತಾರೆ. ಭೂಸನುರಿನಲ್ಲಿ ನನಗೆ ಯಾರು ವೈರಿಗಳು ಇರುವುದಿಲ್ಲ. ನಾನು ಪೋಲಿಸರಿಗೆ ಕಟ್ಟಿಗೆಯಿಂದ ಹೋಡೆದಿರುತ್ತಾರೆ ಅಂತಾ ಹೇಳಿದ ಕಾರಣ ಕಟ್ಟಿಗೆ ತೆಗೆದುಕೊಂಡು ಹೋಗಿರುತ್ತಾರೆ. ಅವರಿಗೆ ಕಟ್ಟಿಗೆಯನ್ನು ಯಾರು ಕೊಟ್ಟರು ನನಗೆ ಗೊತ್ತಿಲ್ಲ. ಆಗ ನನಗೆ ಪ್ರಜ್ಞೆ ಇರಲಿಲ್ಲ ಅಂತಾ ಹೇಳುತ್ತಾರೆ. ನನಗೆ 6-7 ದಿನಗಳ ನಂತರ ಪ್ರಜ್ಞೆ ಬಂದಿರುತ್ತದೆ. ನಾನು ಕಲಬುರಗಿಯ ಜಯದೇವ ಆಸ್ಪತ್ರೆಗೆ ಹೋಗಿ ದಾಖಲಾಗಿದ್ದೇನೆ. ಸದರಿ ಆಸ್ಪತ್ರೆಯು ಕೇವಲ ಹೃದಯಕ್ಕೆ ಸಂಬಂಧಿಸಿದ ಆಸ್ಪತ್ರೆ ಇರುತ್ತದೆ ಎಂದರೆ ಸಾಕ್ಷಿಯು ಕಣ್ಣಿಗೆ ಸಂಬಂಧಿಸಿದ್ದು ಸಹ ಇರುತ್ತದೆ ಅಂತಾ ನುಡಿಯುತ್ತಾರೆ. ನನಗೆ ಯಾವ ವೈದ್ಯರು ಪರೀಕ್ಷೆ ಮಾಡಿರುತ್ತಾರೆ ಅಂತಾ ನನಗೆ ಹೇಳಲು ಬರುವುದಿಲ್ಲ ಸಾಕ್ಷಿಯು ನನಗೆ ಪ್ರಜ್ಞೆ ಇರಲಿಲ್ಲ. ನಾನು ಆಸ್ಪತ್ರೆಯಲ್ಲಿ ೩-೪ ದಿನಗಳ ಕಾಲ ಇದ್ದೇನು. ನಾನು ಯಾವ ವಾರ್ಡನಲ್ಲಿ ಇದ್ದೇ ಅಂತಾ ಹೇಳಲು ಬರುವುದಿಲ್ಲ. ನನ್ನ ಕಣ್ಣು ಪೂರ್ತಿ ಕಂದುಗಟ್ಟಿತ್ತು. ನನ್ನ ಕಣ್ಣು ಸರಿಯಾಗಬೇಕಾದರೆ ೬-೭ ದಿನ ಬೇಕಾಯಿತು. ನನಗೆ ಕಣ್ಣಿಗೆ ಗಾಯವಾದ ಕಾರಣ ನನಗೆ ಏನು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿ.ನಾನು ಯಾವ ದಿನಾಂಕದಂದು ನಿಂಬರ್ಗಾ ಆಸ್ಪತ್ರೆಗೆ

ಹೋಗಿದೆ ಅಂತಾ ನನಗೆ ಗೊತ್ತಿಲ್ಲ. ನಿಂಬರ್ಗಾದಲ್ಲಿ ನನಗೆ ಒಂದು ಇಂಜೆಕ್ಷನ ಮಾಡಿ ಕಣ್ಣಿಗೆ ಪಟ್ಟಿ ಕಟ್ಟಿ ಕಲಬುರಗಿಗೆ ಕರೆದುಕೊಂಡು ಹೋಗಿ ಅಂತಾ ಹೇಳಿರುತ್ತಾರೆ. ನಾನು ಯಾವ ದಿನದಂದು ನಿಂಬರ್ಗಾ ಆಸ್ಪತ್ರೆಗೆ ಹೋಗಿದ್ದೇನು, ಅದೇ ದಿನದಂದು ನನ್ನನ್ನು ಕಳುಸಿರುತ್ತಾರೆ. ನಿಂಬರ್ಗಾದಲ್ಲಿ ಯಾವ ವೈದರು ಇದ್ದರು ಅಂತಾ ನನಗೆ ಹೇಳಲು ಬರುವುದಿಲ್ಲ. ನನ್ನ ಕಣ್ಣಿಗೆ ಯಾವುದೇ ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಜಯದೇವ ಆಸ್ಪತ್ರೆಗೆ ಹೋಗಿರುವುದಿಲ್ಲ ಅಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಯಾವ ದಿನದಂದು ಪಂಚನಾಮೆ ಮಾಡಿರುತ್ತಾರೆ ಅಂತಾ ನನಗೆ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮನೆಯಲ್ಲಿನ ಮಕ್ಕಳು ನನ್ನನ್ನು ಪಂಚನಾಮೆ ಮಾಡಲು ಕರೆದುಕೊಂಡು ಹೋಗಿರುತ್ತಾರೆ ಅಂತಾ ನುಡಿಯುತ್ತಾರೆ. ಪಂಚನಾಮೆಯ ಸಮಯದಲ್ಲಿ ನನ್ನ ಸಹಿ ಮತ್ತು ಪಂಚರಾದ ಅಶೋಕ ಮತ್ತು ಪೃಥ್ವಿ ಅವರ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ಪಿ.ಎಸ್.ಐ ರವರು ಮಾಡಿರುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಅಂತಾ ನನಗೆ ತಿಳಿಯುವುದಿಲ್ಲ. ನನ್ನ ಮೈಮೇಲೆ ರಕ್ತ ಬಿದಿತ್ತು ಬಟ್ಟೆಯ ಮೇಲೆಯೂ ಸಹ ರಕ್ತ ಬಿದ್ದಿತ್ತು. ಸದರಿ ಬಟ್ಟೆಯನ್ನು ಪೋಲಿಸರು ನೋಡಿದ್ದಾರೆ ಎಂದರೆ ಸಾಕ್ಷಿಯು ಸದರಿ ಬಟ್ಟೆಯು ಹರಿದ ಕಾರಣ ಬೇರೆ ಬಟ್ಟೆಯನ್ನು ಹಾಕಿಕೊಂಡು ಹೋಗಿರುತ್ತೇನೆ ಅಂತಾ ನುಡಿಯುತ್ತಾರೆ. ಪೋಲಿಸರು ಸದರಿ ರಕ್ತ ಹತ್ತಿದ ಬಟ್ಟೆಯನ್ನು ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ರಕ್ತ ಹತ್ತಿದ ಬಟ್ಟೆಯನ್ನು ಮನೆಯವರು ತೆಗೆದು ಬೇರೆ ಬಟ್ಟೆ ಹಾಕಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾವು ವಾಹನದಲ್ಲಿ ಆಸ್ಪತ್ರೆಗೆ ಹೋಗಿರುತ್ತೇವೆ ಅಂತಾ ನನಗೆ ಪ್ರಜ್ಞೆ ಇಲ್ಲದೇ ಇದ್ದ ಕಾರಣ ಹೇಳಲು ಬರುವುದಿಲ್ಲ. ನಾನು ಯಾವ ದಿನಾಂಕದಂದು ಪ್ರಜ್ಞೆ ತಪ್ಪಿದೇ ಅಂತಾ ಹೇಳಲು ಬರುವುದಿಲ್ಲ. ಚಾಸಾ ೪ ರಿಂದ ೬ ರವರು ಜಗಳ ಬಿಡಿಸಿದಾಗ ನನಗೆ ತಲೆಗೆ ಪಟ್ಟಿ ಕಟ್ಟಿರಲಿಲ್ಲ. ಹಣಮಂತರಾಯ ಮೈನಾಳರವರು ಯಾವ ದಿನಾಂಕದಂದು ತಿರಿಕೊಂಡಿರುತ್ತಾರೆ ಅಂತಾ ನನಗೆ ಹೇಳಲು ಬರುವುದಿಲ್ಲ. ನನಗೆ ಅವರು ತಿರಿಕೊಂಡ ಬಗ್ಗೆ ಯಾರು ನನಗೆ ಕರೆದಿರಲಿಲ್ಲ ಎಂದರೆ ಸರಿ. ಭಜನೆಯನ್ನು ಯಾರು ಮಾಡುತ್ತಿದ್ದರು ಅಂತಾ ನನಗೆ ಹೇಳಲುಬರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಭಜನೆ ಕೇಳಲು ಹೋಗಿದ್ದೇ ಅಂತಾ ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ಜಗಳ ಆಗಿತ್ತು. ಆರೋಪಿತರು ನನ್ನ ಹಿಂದೇ ೨.೦೦ ಗಂಟೆಗೆ ಬಂದಿದ್ದರು. ನನಗೆ ಕಟ್ಟಿಗೆಯಿಂದ ಗುರುಲಿಂಗಪ್ಪರವರು ಹ್ೋಡೆದಿರುತ್ತಾರೆ. ಅವರು ನನಗೆ ಮೈಯೆಲ್ಲಾ ಹೋಡೆದಿರುತ್ತಾರೆ. ಅವರು

ಹೊಡೆದ ಜಾಗದಲ್ಲಿ ಗಾಯ ಆಗಿತ್ತೇನು ಎಂದರೆ ಸಾಕ್ಷಿಯ ಗಾಯ ಆಗಿತ್ತು ಎಂದು ನುಡಿಯುತ್ತಾರೆ. ನಾನು ವೈದ್ಯರಿಗೆ ಸದರಿ ಗಾಯಗಳನ್ನು ತೋರಿಸಿರುತ್ತೇನೆ. ನಿಂಬರ್ಗಾದಲ್ಲಿ ವೈದರಿಗೆ ಸದರಿ ಗಾಯಗಳನ್ನು ತೋರಿಸಿರುತ್ತೇನೆ.

ಆರೋಪಿತರ ಪರ ವಕೀಲರಿಂದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ, ನೀಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ